# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 834(975)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 14.03.2025

ಉತ್ತರಿಸಬೇಕಾದವರು : ಸನ್ಮಾನ್ಯ ಮುಖ್ಯ ಮಂತ್ರಿಯವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪಾರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006ರ ಮತ್ತು ನಿಯಮಗಳು 2008ರ ಕಾಯ್ದೆಯ ಪ್ರಕಾರ ಗ್ರಾಮ ಅರಣ್ಯ ಹಕ್ಕು ಸಮಿತಿ ಸ್ಥಾಪಿಸಲು ಇರುವ ಮಾನದಂಡಗಳು ಯಾವುವು; (ವಿವರ ನೀಡುವುದು) | ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006ರ ಮತ್ತು ನಿಯಮಗಳು 2008ರಡಿ ಗ್ರಾಮ ಅರಣ್ಯ ಹಕ್ಕು ಸಮಿತಿಯನ್ನು ಸ್ಥಾಪಿಸಲು ಈ ಕೆಳಕಂಡ ಅಂಶಗಳನ್ನು ಪಾಲಿಸುವಂತೆ ತಿಳಿಸಲಾಗಿದೆ.<br><br>**ಅರಣ್ಯ ಹಕ್ಕುಗಳ ಸಮಿತಿ ಎಂದರೆ, 3ನೇ ನಿಯಮದ ಮೇರೆಗೆ ಗ್ರಾಮ ಸಭೆಯು ರಚಿಸಿದ ಸಮಿತಿ ಎಂದು ಅರ್ಥ,**<br><br>1. ಗ್ರಾಮ ಪಂಚಾಯಿತಿಯು ಗ್ರಾಮ ಸಭೆಗಳನ್ನು ಕರೆಯತಕ್ಕದ್ದು ಮತ್ತು ಅದರ ಪ್ರಥಮ ಸಭೆಯಲ್ಲಿ, ತನ್ನ ಸದಸ್ಯರುಗಳ ಪೈಕಿ ಹತ್ತಕ್ಕಿಂತ ಕಡಿಮೆಯಿರದ ಆದರೆ ಹದಿನೈದಕ್ಕೆ ಮೀರದ ವ್ಯಕ್ತಿಗಳನ್ನು ಅರಣ್ಯ ಹಕ್ಕುಗಳ ಸಮಿತಿಯ ಸದಸ್ಯರನ್ನಾಗಿ ಚುನಾಯಿಸತಕ್ಕದ್ದು. ಅವರಲ್ಲಿ ಕೊನೇ ಪಕ್ಷ ಮೂರನೇ ಒಂದು ಭಾಗದಷ್ಟು ಸದಸ್ಯರು ಅನುಸೂಚಿತ ಬುಡಕಟ್ಟಿಗೆ ಸೇರಿದವರಾಗಿರತಕ್ಕದ್ದು; ಪರಂತು, ಅಂಥ ಸದಸ್ಯರ ಮೂರನೇ ಒಂದು ಭಾಗದಷ್ಟು ಮಹಿಳಾ ಸದಸ್ಯರಿರತಕ್ಕದ್ದು; ಮತ್ತು ಪರಂತು, ಅನುಸೂಚಿತ ಬುಡಕಟ್ಟುಗಳ ಸದಸ್ಯರಿಲ್ಲದಿರುವಲ್ಲಿ, ಕೊನೇ ಪಕ್ಷ ಅಂಥ ಸದಸ್ಯರ ಮೂರನೇ ಒಂದು ಭಾಗದಷ್ಟು ಮಹಿಳಾ ಸದಸ್ಯರಿರತಕ್ಕದ್ದು.<br>2. ಅರಣ್ಯ ಹಕ್ಕುಗಳ ಸಮಿತಿಯು, ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಬಗ್ಗೆ ನಿರ್ಣಯಿಸತಕ್ಕದ್ದು ಮತ್ತು ಅದನ್ನು ಉಪ ವಿಭಾಗೀಯ ಮಟ್ಟದ ಸಮಿತಿಗೆ ತಿಳಿಸತಕ್ಕದ್ದು<br>3. ಅರಣ್ಯ ಹಕ್ಕುಗಳ ಸಮಿತಿಯ ಸದಸ್ಯನು ತನ್ನದೇ ಆದ ಅರಣ್ಯ ಹಕ್ಕಿನ ಕ್ಲೇಮುದಾರನು ಸಹ ಆಗಿದ್ದಲ್ಲಿ, ಅವನು ಆ ಬಗ್ಗೆ ಸಮಿತಿಗೆ ತಿಳಿಸತಕ್ಕದ್ದು ಮತ್ತು ಅವನ ಕ್ಲೇಮನ್ನು ಪರಿಶೀಲಿಸುವಾಗ ಪರಿಶೀಲನಾ ವ್ಯವಹರಣೆಗಳಲ್ಲಿ ಭಾಗವಹಿಸತಕ್ಕದ್ದಲ್ಲ. |

| | | |
|---|---|---|
| ಆ) | ಅರಣ್ಯ ಹಕ್ಕು ಕಾಯ್ದೆಯಡಿ ಪಂಚಾಯತಿ ವ್ಯಾಪ್ತಿಯ ಕಂದಾಯ ಗ್ರಾಮಗಳಷ್ಟೇ ಅಲ್ಲದೆ, ಪ್ರತಿ ಸಣ್ಣ ಸಣ್ಣ ಗ್ರಾಮಗಳಲ್ಲಿಯೂ ಕೂಡ ಗ್ರಾಮ ಅರಣ್ಯ ಹಕ್ಕು ಸಮಿತಿ ರಚಿಸಲು ಕಾನೂನಿನಲ್ಲಿ ಇದ್ದರೂ ಹಲವು ಕಡೆ ಎಲ್ಲಾ ಗ್ರಾಮಗಳನ್ನು ಸೇರಿಸಿ ಪಂಚಾಯತಿ ಮಟ್ಟದಲ್ಲಿ ಮಾತ್ರ ಸಮಿತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ನೀಡುವುದು; | ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮಸಭೆ ಕರೆದು ಗ್ರಾಮ ಅರಣ್ಯ ಹಕ್ಕು ಸಮಿತಿಗಳ ಸದಸ್ಯರುಗಳನ್ನು ನಿಯಮಾನುಸಾರ ಚುನಾಯಿಸಲಾಗುತ್ತಿದೆ. ಅರಣ್ಯ ಹಕ್ಕು ಕಾಯ್ದೆಯಡಿ ಯಾವುದೇ ಅರಣ್ಯ ಗ್ರಾಮ, ಹಳೆಯ ವಾಸಸ್ಥಳ ಅಥವಾ ಜನವಸತಿ ಮತ್ತು ಸಮೀಕ್ಷೆ ಮಾಡಿರದ ಗ್ರಾಮವನ್ನು ಸಹ ಗ್ರಾಮವೆಂದು ಪರಿಗಣಿಸಲು ಅವಕಾಶವಿದ್ದು ಈ ಸಂಬಂಧ ಸಂಬಂಧಿಸಿದ ಗ್ರಾಮ ಪಂಚಾಯತಿ ಗ್ರಾಮ ಸಭೆಯು ತಿರ್ಮಾನಿಸುತ್ತದೆ.<br><br>ಸಣ್ಣ ಸಣ್ಣ ಗ್ರಾಮ/ ಜನವಸತಿಗಳಲ್ಲಿ ಅರಣ್ಯ ಹಕ್ಕು ಸಮಿತಿ ಬೇಡಿಕೆ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಉಪವಿಭಾಗ ಮಟ್ಟದ ಹಾಗೂ ಜಿಲ್ಲಾಮಟ್ಟದ ಅರಣ್ಯ ಹಕ್ಕು ಸಮಿತಿಗಳ ಮೂಲಕ ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ 10599 ಗ್ರಾಮ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ. ಜಿಲ್ಲಾವಾರು ಗ್ರಾಮ ಅರಣ್ಯ ಸಮಿತಿಗಳ ಸಂಖ್ಯೆಯನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಇ) | ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ರ ಮತ್ತು ನಿಯಮಗಳು-2008ರ ಕಾಯ್ದೆಯ ಕುರಿತು ಜಾಗೃತಿ ಮೂಡಿಸಲು ಸರ್ಕಾರ ಹಮ್ಮಿಗೊಂಡಿರುವ ಕಾರ್ಯಕ್ರಮಗಳಾವುವು?<br><br>(ಮಾಹಿತಿ ನೀಡುವುದು) | ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ರ ಮತ್ತು ನಿಯಮಗಳು-2008ರ ಕಾಯ್ದೆಯ ಕುರಿತು ಜಾಗೃತಿ ಮೂಡಿಸಲು ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಂದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಜಿಲ್ಲಾ ಅರಣ್ಯ ಹಕ್ಕು ಸಮಿತಿಯು ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರು ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾಯಿತ ಜನಪ್ರತಿನಿಧಿಗಳಿಗೆ ತರಬೇತಿ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. |

**STW/SECA/TSP/10/2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿಗಳು

| ಅನುಬಂಧ-1 | | |
|---|---|---|
| ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) ರವರು ಚುಕ್ಕೆ ಗುರುತಿಲ್ಲದ ಪ್ರ.ಸಂ.975 ಗೆ ಉತ್ತರ | | |
| **Sl.No** | **Name of the District** | **No. of FRC constituted** |
| 1 | Mysore | 146 |
| 2 | Shimoga | 1406 |
| 3 | Chickmagalur | 743 |
| 4 | Uttara Kannada | 1153 |
| 5 | Chamrajnagar | 121 |
| 6 | Kodagu | 304 |
| 7 | Dakshina Kannada | 370 |
| 8 | Udupi | 237 |
| 9 | Gadag | 31 |
| 10 | Belgaum | 1223 |
| 11 | Koppal | 10 |
| 12 | Ramanagar | 85 |
| 13 | Davanagere | 522 |
| 14 | Chitradurga | 1023 |
| 15 | Hassan | 637 |
| 16 | Haveri | 135 |
| 17 | Bellary | 364 |
| 18 | Raichur | 65 |
| 19 | Bagalakote | 386 |
| 20 | Tumkur | 688 |
| 21 | Kalaburgi | 292 |
| 22 | Bangalore (R) | 144 |
| 23 | Dharawada | 142 |
| 24 | Vijayapura | 210 |
| 25 | Mandya | 30 |
| 26 | Chikkaballapura | 55 |
| 27 | Bengaluru (U) | 4 |
| 28 | Bidar | 1 |
| 29 | Kolar | 5 |
| 30 | Yadgiri | 44 |
| 31 | Vijayanagara | 23 |
| | **Total** | **10599** |